ಸದನದಲ್ಲಿ ಉತ್ತರಿಸುವ ಪ್ರಶ್ನೆಗಳ ಪಟ್ಟಿ

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಶುಕ್ರವಾರ, ದಿನಾಂಕ 19ನೇ ಜುಲೈ, 2019

ಕೊಡಗು ಜಿಲ್ಲೆಯಲ್ಲಿ ಕಳೆದ ವರ್ಷ ಸಂಭವಿಸಿದ ಪ್ರಕೃತಿ ವಿಕೋಪದಿಂದ ಹಾಳಾಗಿರುವ ಲೋಕೋಪಯೋಗಿ ರಸ್ತೆಗಳ ದುರಸ್ತಿ ಕುರಿತು

ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) -

69 (567) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ಕೊಡಗು ಜಿಲ್ಲೆಯಲ್ಲಿ ಕಳೆದ ವರ್ಷ ಸಂಭವಿಸಿದ ಪ್ರಕೃತಿ ವಿಕೋಪದಿಂದ ಬಹತೇಕ ಲೋಕೋಪಯೋಗಿ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸದರಿ ರಸ್ತೆಗಳ ದುರಸ್ತಿಗೆ ಸರ್ಕಾರ ಅಂದಾಜಿಸಿರುವ ಮೊತ್ತವೆಷ್ಟು; (ರಸ್ತೆವಾರು ಪ್ರತ್ಯೇಕ ವಿವರ ನೀಡುವುದು)

(ಇ) 2018-19ನೇ ಸಾಲಿನಲ್ಲಿ ಸದರಿ ಅಂದಾಜು ಪ್ರಕಾರ ಕೈಗೊಂಡಿರುವ ಕಾಮಗಾರಿಗಳು ಯಾವುವು ; (ವಿನಿಯೋಗಿಸಿದ ಅನುದಾನ ಹಾಗೂ ಪ್ರತಿ ಕಾಮಗಾರಿಯ ಪ್ರಗತಿಯ ಹಂತದ ಸಂಪೂರ್ಣ ವಿವರ ನೀಡುವುದು)

(ಈ) 2019-20ನೇ ಸಾಲಿನಲ್ಲಿ ಕೈಗೊಂಡಿರುವ ಕಾಮಗಾರಿಗಳು ಯಾವುವು ? (ಪ್ರತಿ ಕಾಮಗಾರಿಯ ಅಂದಾಜು ಮೊತ್ತ ವಿನಿಯೋಗಿಸಿದ ಮೊತ್ತ ಹಾಗೂ ಕಾಮಗಾರಿಯ ಪ್ರಗತಿಯ ಹಂತದ ಸಂಪೂರ್ಣ ವಿವರ ನೀಡುವುದು)